**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.389/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಪುಟ್ಟೇಗೌಡ ಜಿ.ಕೆ. | ಫ್ರಾಸಾ-8 |
| ತಂದೆಯ ಹೆಸರು | : ಕೆಂಚೇಗೌಡ | ಚಾಸಾ-22 |
| ವಯಸ್ಸು | : 49 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಹೆಚ್.ಸಿ. | ದಿನಾಂಕಃ23.09.2025. |
| ವಾಸಸ್ಥಳ | : ಮೂಡಿಗೆರೆ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಫ್ರಾಪ್ಲ್ಯಾ.ಸ.ಸ.ಅ. ರವರಿಂದ:**

ನಾನು ಕಳೆದ ನಾಲ್ಕು ವರ್ಷಗಳಿಂದ ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿ.22.11.2021 ರಂದು ಚಾಸಾ-24 ರವರ ನಿರ್ದೇಶನದಂತೆ ಹಾಸನದ ಸರ್ಕಾರಿ ಆಸ್ಪತ್ರೆಗೆ ಬೇಟಿ ನೀಡಿ ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚಾಸಾ-1 ರವರ ಹೇಳಿಕೆಯನ್ನು ಮ.2.00 ರಿಂದ 3.00 ಗಂಟೆಯವರೆಗೂ ದಾಖಲಿಸಿಕೊಂಡು ಸ.4.30 ಕ್ಕೆ ಠಾಣೆಗೆ ವಾಪಸ್ಸಾಗಿ ಠಾಣಾ SHO ಆಗಿದ್ದ ಚಾಸಾ-23 ರವರ ಸಮಕ್ಷಮ ಹಾಜರುಪಡಿಸಿರುತ್ತೇನೆ.

ಸಾಕ್ಷಿಯು ನಿಪಿ-1 ರ ದೂರು ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**

ದಿ.22.11.2021 ರಂದೇ ಚಾಸಾ-24 ರವರು ನನಗೆ ನಿರ್ದೇಶನ ನೀಡಿದ್ದರು. ಆ ದಿನ ಆಸ್ಪತ್ರೆಯಿಂದ ಬಂದ ಇಂಟಿಮೇಷನ್ ನ್ನು ನನಗೆ ಕೊಟ್ಟು ಕಳುಹಿಸಿದ್ದರು. ಆ ಇಂಟಿಮೇಷನ್ ಯಾವ ದಿನಾಂಕದ್ದು ಎಂದು ನನಗೆ ನೆನಪಿಲ್ಲ, ಆದರೆ ಅದು ಹಾಸನದ ಸರ್ಕಾರಿ ಆಸ್ಪತ್ರೆಯಿಂದ ಬಂದಿತ್ತು. ಆ ದಿನ ಬೆ.8.00 ಗಂಟೆಗೆ ಠಾಣೆಯಿಂದ ಹಾಸನಕ್ಕೆ ಹೊರಟೆ. ಹಾಸನ ತಲುಪಿದಾಗ ಮ.1.00 ಗಂಟೆ ಸಮಯವಾಗಿತ್ತು. ಆ ಸಮಯಕ್ಕೆ ಚಾಸಾ-1 ರವರು ಯಾವ ವಾರ್ಡ್ ನಲ್ಲಿ ಇದ್ದರು ಎಂದು ನನಗೆ ನೆನಪಿಲ್ಲ. ಆ ಸಮಯಕ್ಕೆ ಚಾಸಾ-1 ರವರು ಸಹಿ ಮಾಡುವ ಸ್ಥಿತಿಯಲ್ಲಿ ಇದ್ದರು. ಯಾವ ಕಂಪೆನಿಯ ಕೀಟ ನಾಶಕವನ್ನು ತಾವು ಸೇವನೆ ಮಾಡಿದ್ದು ಎಂದು ಚಾಸಾ-1 ರವರು ಹೇಳಿರಲಿಲ್ಲ. ಆದರೆ ದಿ.21.11.2021 ರಂದು ಕೀಟ ನಾಶಕ ಸೇವನೆ ಮಾಡಿದ್ದೆ ಎಂದು ಹೇಳಿದ್ದರು. ನಾನು ಹೇಳಿದಂತೆ ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಚಾಸಾ-1 ರವರ ಹೇಳಿಕೆ ದಾಖಲಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಸಹಾಯವಾಗುವಂತೆ ನಿಪಿ-1 ನ್ನು ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.